ಅ.ದಾ. ಸಂಃ 397 /2017 ಪಿ.ಡಬ್ಲ್ಯು: 01

ದಿನಾಂಕ 12-10-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು ಶ್ರೀ. ಟಿ.ಕೆ.ವಿ 1 ನೇ ಪ್ರತಿವಾದಿ ಪರ ವಕೀಲರಿಂದಃ</u>

ಆ ದಿನ ಸ್ಟಾಂಪ್ ಪೇಪರ್ ಅನ್ನು ನೀವೇ ಖರೀದಿಸಿದ್ದೀರ ಎಂಬ ಪ್ರಶ್ನೆಗೆ ಸಾಕ್ಷಿ ನಾನು ಹೋಗಿದ್ದೆ ಆದರೆ ಗೌತಮ್ ರವರು ಸ್ಟಾಂಪ್ ಪೇಪರ್ ಅನ್ನು ಖರೀದಿಸಿದರು ಎಂದು ನುಡಿಯುತ್ತಾರೆ. ಆ ದಿನ 1 ನೇ ಪ್ರತಿವಾದಿಗೆ ನೀಡಿದ್ದೇನೆ ಎಂದು ಹೇಳುವ ಹಣವು ಆಗ್ರಿಮೆಂಟ್ ಅನ್ನು ಹೊರತು ಪಡಿಸಿ ಬೇರೆ ಎಲ್ಲಿಯೂ ಆ ಹಣ ಹೇಗೆ ಬಂತು ಎಂಬುದನ್ನು ಹೇಳಿರುವುದಿಲ್ಲ ಎಂದರೆ ಸರಿ. ನನ್ನ ಬಳಿ ಬ್ಯಾಂಕ್ ಖಾತೆ ಮತ್ತು ಚೆಕ್ ಬುಕ್ ಇದೆ ಎಂದರೆ ಸರಿ. ಸಾಕ್ಷಿ ಮುಂದುವೆರದು ಆ ದಿನ ನಾನು ಚೆಕ್ ಬುಕ್ ಅನ್ನು ಪಡೆದಿರಲಿಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಬ್ಯಾಂಕ್ ಖಾತೆಯನ್ನು ತೆರೆದ ಕೂಡಲೇ ಚೆಕ್ ಬುಕ್ ಅನ್ನು ಸಹ ನೀಡುತ್ತಾರೆ ಎಂದರೆ ಸರಿ. ನಿಪಿ-1 ಕ್ಕೆ ಸಹಿ ಮಾಡಿರುವ ಎರಡನೇ ಸಾಕ್ಷಿದಾರರಾದ ಆನಂದರವರು ತುಮಕೂರಿನವರು ಎಂದರೆ ಸರಿ. ಸಾಕ್ಷಿ ಮುಂದುವೆರದು ಅವರು ಇಲ್ಲೆ ಕೆಲಸ ಮಾಡುತ್ತಾರೆ ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿ ಸಹಿ ಮಾಡಿರುವ 2 ನೇ ಸಾಕ್ಷಿಯ ಹೆಸರಿನ ನಂತರ ಅವರ ಗೌರಿಬಿದನೂರಿದ ವಿಳಾಸವನ್ನು ಬರೆದಿರುವುದಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಯಿಂದ ಜಾಗವನ್ನು ಖರೀದಿಸಿರುವ ವಿಚಾರಕ್ಕೆ ಸಂಬಂಧಪಟ್ಟಂತೆ 1 ನೇ ಪ್ರತಿವಾದಿಯ ತಂದೆಯು ಗೌರಿಬಿದನೂರಿನ ಪುರ ಪೋಲೀಸ್ ಠಾಣೆಯಲ್ಲಿ 2 ನೇ ಪ್ರತಿವಾದಿಯ ವಿರುದ್ಧ ಮೌಕಿಕ ದೂರನ್ನು ನೀಡಿದದರು ಹಾಗೂ 2 ನೇ ಪ್ರತಿವಾದಿಯನ್ನು ಠಾಣೆಗೆ ಕರೆಯಿಸಿದರು ಎಂದರೆ ಗೊತ್ತಿಲ್ಲ. 2 ನೇ ಪ್ರತಿವಾದಿಯು ಠಾಣೆಯಲ್ಲಿ ಕ್ರಯ ಪತ್ರದಲ್ಲಿ ಅವ್ಯವಹಾರ ನೆಡೆದಿದೆ ಎಂಬ ವಿಚಾರವನ್ನು ಒಪ್ಪಿಕೊಂಡಿರುವುದಿಲ್ಲ ಎಂದರೆ ಗೊತ್ತಿಲ್ಲ. ತದನಂತರ 2 ನೇ

ಪ್ರತಿವಾದಿಯು ಆ ಸೈಟ್ ಅನ್ನು 1 ನೇ ಪ್ರತಿವಾದಿಯ ಚಿಕ್ಕಪ್ಪನಿಗೆ ಮಾಡಿಕೊಟ್ಟರು ಎಂದರೆ ಗೊತ್ತಿಲ್ಲ.

ರೂ. 4,50,000/- ಗಳನ್ನು ಚೆಕ್ ಮೂಲಕ ನೀಡಲು ನಿಮಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಅವರು ಹಣವನ್ನು ನಗದು ರೂಪದಲ್ಲಿ ಕೇಳಿದ ಕಾರಣ ನಗದು ರೂಪದಲ್ಲಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಸೈಟಿಗೆ ಸಂಬಂಧಪಟ್ಟಂತೆ ಕರಾರು ಪತ್ರವನ್ನು ಮಾಡಿಕೊಡುವಂತೆ ಹಲವಾರು ಜನರು 1 ನೇ ಪ್ರತಿವಾದಿಗೆ ಬೆದರಿಕೆ ಹಾಕುತ್ತಿದದರು ಎಂದರೆ ಗೊತ್ತಿಲ್ಲ. ಆ ಕಾರಣದಿಂದಾಗಿ 1 ನೇ ಪ್ರತಿವಾದಿಯು ತನ್ನ ಮನೆಯನ್ನು ಬಿಟ್ಟು ಓಡಿ ಹೋಗಿದ್ದನು ಎಂದರೆ ಗೊತ್ತಿಲ್ಲ. ಅದೇ ಕಾರಣಕ್ಕಾಗಿ 1 ನೇ ಪ್ರತಿವಾದಿಯ ತಂದೆಯವರು ಗೌರಿಬಿದನೂರು ಪುರ ಪೋಲೀಸ್ ಠಾಣೆಯಲ್ಲಿ ಲಿಕಿತ ದೂರು ನೀಡಿದ್ದರು ಎಂರದರೆ ಗೊತ್ತಿಲ್ಲ.

ಸೈಟಿಗೆ ಸಂಬಂಧಪಟ್ಟಂತೆ ಬೇರೆ ಕ್ರಯ ಪತ್ರಗಳು ಆಗುತ್ತಿರುವ ವಿಚಾರಗಳು ನನ್ನ ಗಮನಕ್ಕೆ ಬಂದ ಮೇಲೆ ಸೈಟಿಗೆ ಸಂಬಂಧಪಟ್ಟಂತೆ ಖಾತೆ ಬದಲಾವಣೆ ಮಾಡಬಾರದೆಂದು ಸಂಬಂಧಪಟ್ಟ ಪಂಚಾಯ್ತಿಯಲ್ಲಿ ಅರ್ಜಿಯನ್ನು ನೀಡಿರುವಿರಾ ಎಂಬ ಪ್ರಶ್ನೆಗೆ ಸಾಕ್ಷಿ ಅರ್ಜಿಯನ್ನು ನೀಡಲು ಹೋದಾಗ ಪಂಚಾಯ್ತಿಯವರು ಸ್ವೀಕರಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಅರ್ಜಿಯನ್ನು ಅಂಚೆ ಮೂಲಕ ಪಂಚಾಯ್ತಿಗೆ ಕಳುಹಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಸದರಿ ಅರ್ಜಿಯನ್ನು ನಾನು ನ್ಯಾ ಹಾಜರುಪಡಿಸಿಲ್ಲ.

3 ನೇ ಪ್ರತಿವಾದಿಗೆ ಯಾವಾಗ ಖಾತೆ ಆಯಿತು ಎಂಬುದು ನನಗೆ ಗೊತ್ತಿಲ್ಲ. ನಿಪಿ-1 ರ ಕ್ರಯದ ಕರಾರು ಪತ್ರವು ಸೃಷ್ಟಿ ಮಾಡಿರುವ ಕ್ರಯ ಪತ್ರವಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿರುವ 1 ನೇ ಪ್ರತಿವಾದಿಯ ಸಹಿ ಎಂದು ಹೇಳುವ ಸಹಿಯನ್ನು ನಾನೇ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ಮತ್ತು 1 ನೇ ಪ್ರತಿವಾದಿಯ ಮಧ್ಯೆ ಯಾವುದೇ

ಸಂಬಂಧಯಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ರ ಕರಾರು ಪತ್ರವು ಸುಳ್ಳು ಎಂದು ಗೊತ್ತಿದ್ದರೂ ಸಹ ನ್ಯಾ. ಮುಂದೆ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು **3** ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಜೆ**.**ಕೆ**.**ಎನ್**.** ವಕೀಲರಿಂದಃ

ನಿಪಿ-2 ರ ತಿಳುವಳಿಕೆ ಪತ್ರವನ್ನು 3 ನೇ ಪ್ರತಿವಾದಿಗೆ ನೀಡಿರವುದಿಲ್ಲ ಎಂದರೆ ಸರಿ. 3 ನೇ ಪ್ರತಿವಾದಿಗೆ ತಿಳುವಳಿಕೆ ಪತ್ರವನ್ನು ನೀಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. 3 ನೇ ಪ್ರತಿವಾದಿಗೆ ಯಾವುದೇ ತಿಳುವಳಿಕೆ ಪತ್ರವನ್ನು ನೀಡದೆ ವಿನಾಃ ಕಾರಣ ಅವರನ್ನು ಈ ದಾವೆಯಲ್ಲಿ ಪಕ್ಷಗಾರಾನ್ನಾಗಿ ಸೇರಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಪ್ರ.ಸಿ.ನ್ಯಾ.ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು